ಅಸ್ಥಿಪಂಜರದಂಗಾಗಿ ಬಿಟ್ಟಿದ್ದರು. ಅವರು ಇನ್ನೇನು ಇಂದು ನಾಳೆ... ಇಂದು ನಾಳೆ... ಎನ್ನುವಂಗಾಗಿದ್ದರು. ಇದು ಪಂಚಯ್ಯಸ್ವಾಮಿಗಳ ಅರಿವಿಗೂ ಬಂದಿತ್ತು. ಆದರೂ ಬಾಯಿಬಿಟ್ಟು ಯಾರ ಮುಂದೆಯೂ ಅನ್ನುವ ಮನಸ್ಸಾಗಿರಲಿಲ್ಲ. ಕಳೆದ ಐದಾರು ವರ್ಷಗಳಿಂದ ವಯೋಸಹಜವಾದ ಕಾಯಿಲೆಗಳಿಂದ ಬಳಲುತ್ತಿದ್ದ ಅವರು ಆಗಾಗ ಅಜಾರಿ ಬೀಳುತ್ತಿದ್ದರು. ಹಾಗೆ ಅಜಾರಿ ಬಿದ್ದಾಗಲೆಲ್ಲ ಬೆಳಗಾವಿಯ ಕೆ.ಎಲ್.ಈ ಆಸ್ಪತ್ರೆಯಲ್ಲಿ ಒಂದೆರಡು ದಿನಗಳ ಮಟ್ಟಿಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡು ಮತ್ತೇ ಗೆಲುವಾಗಿ ಮಠಕ್ಕೆ ಮರಳುತ್ತಿದ್ದರು. ಹೀಗೆ ಮರಳಿ ಬಂದವರು ಅರಾಮನ್ನು ಸಹ ತೆಗೆದುಕೊಳ್ಳದೆ ಭಕ್ತರಿಗೆ ದರ್ಶನವನ್ನು ಕೊಡುತ್ತ, ಮಠದ ಕೆಲಸಗಳಲ್ಲಿ ತೊಡಗಿಕೊಂಡು ಬಿಡುತ್ತಿದ್ದರು. ಇದು ಇತ್ತಿತ್ತಲಾಗಿ ಸಾಮಾನ್ಯವಾಗಿತ್ತು. ಆದರೆ, ಅದೇಕೇನೋ ಗಂಗಾಧರಯ್ಯಸ್ವಾಮಿಗಳಿಗೆ ಬರುಬರುತ್ತ ದೇಹ ಸಹಕರಿಸದಂತಾಯಿತು. ಈಗ ವರ್ಷ ದೀಡವರ್ಷದ ಹಿಂದೆ ಮಹಾನವಮಿಯ ಸಂದರ್ಭದಲ್ಲಿ ಮಠದಲ್ಲಿ ಅವರು ದೇವಿ ಪುರಾಣ ನಡೆಸಿಕೊಡುತ್ತಿರುವಾಗಲೇ ಇದ್ದಕ್ಕಿದ್ದಂಗೆ ಭಕ್ತರ ಸಮ್ಮುಖದಲ್ಲಿಯೇ ತೀವ್ರ ಹೃದಯಾಘಾತಕ್ಕೊಳಗಾಗಿದ್ದರು. ಆಗ, ಅದೇ ಕೆ.ಎಲ್.ಈ ಆಸ್ಪತ್ರೆಯಲ್ಲಿ ತಿಂಗಳುಗಟ್ಟಲೆ ಸಾವು ಬದುಕಿನೊಂದಿಗೆ ಹೋರಾಟ ನಡೆಸಿ ಅದ್ಹೇಗೋ ಬದುಕುಳಿದು ಮತ್ತೇ ಮಠಕ್ಕೆ ಜೀವಂತವಾಗಿ ಮರಳಿ ಬಂದಿದ್ದರು. ಆದರೂ ಇದೆಲ್ಲ ಅವರನ್ನು ಸಾಕಷ್ಟು ಹೈರಾಣಾಗಿಸಿತ್ತು. ದೈಹಿಕವಾಗಿ ಇನ್ನು ಮೇಲೆ ಸುಧಾರಿಸಲು ಆಗದಷ್ಟು ಮೆತ್ತಗಾಗಿದ್ದ ಅವರಿಗೆ ತಾನಿನ್ನು ಬಹಳ ದಿನ ಬದುಕುಳಿಯುವುದಿಲ್ಲ ಎಂಬುದು ಗೊತ್ತಾಗಿ ಹೋಗಿತ್ತು. ಅದಕ್ಕೇ, ಅವರು ಊರಿನ ಗಣ್ಯರು ಮತ್ತು ಭಕ್ತರ ಸಮ್ಮುಖದಲ್ಲಿ ವಿರಕ್ತ ಮಠಕ್ಕೆ ತನ್ನ ನಂತರದ ಉತ್ತರಾಧಿಕಾರಿಯನ್ನು ನೇಮಿಸುವ ನಿರ್ಧಾರವನ್ನು ತೆಗೆದುಕೊಂಡರು. ಹೀಗೆ, ಊರಿನ ಹಿರಿಯರು ಮತ್ತು ಭಕ್ತರ ಒಪ್ಪಿಗೆಯನ್ನು ಪಡೆದು, ಅವಸರದಲ್ಲಿ ಮಹಾರಾಷ್ಟ್ರದ ಶಿವನೇರಿ ಮಠದಲ್ಲಿದ್ದುಕೊಂಡು ತತ್ವಶಾಸ್ತ್ರದಲ್ಲಿ ಎಂ ಎ ಪದವಿ ಪಡೆದಿದ್ದ; ಬಸವಾದಿ ಶರಣರಿಂದ ಹಿಡಿದು ಅರಿಸ್ಟಾಟಲ್ – ಪ್ಲೇಟೋವರೆಗೆ ಆಳವಾಗಿ ಓದಿಕೊಂಡಿದ್ದ, ಅಧ್ಯಾತ್ಮದ ವಿಚಾರಗಳನ್ನು ಅರೆದು ಕುಡಿದಿದ್ದ ಪಂಚಯ್ಯಸ್ವಾಮಿಗಳನ್ನು ಉತ್ತರಾಧಿಕಾರಿಯನ್ನಾಗಿಸಿಕೊಂಡಿದ್ದರು. ಆಗಲೇ, ಹಾರೀಗೇರಿಯ ವಿರಕ್ತ ಮಠಕ್ಕೆ ಬಂದು ಗಂಗಾಧರಯ್ಯಸ್ವಾಮಿಗಳ ಕೂಡ ಇರತೊಡಗಿದ ಪಂಚಯ್ಯಸ್ವಾಮಿಗಳು ಬಹಳಿಲ್ಲ ತೋಡೆ ಮಠದ ಜವಾಬ್ದಾರಿಯನ್ನು ನಿರ್ವಹಿಸತೊಡಗಿದರು. ಇದು ಮಠವನ್ನು ಕಟ್ಟಿ ಬೆಳೆಸಲು ಸಾಕಷ್ಟು ಶ್ರಮಿಸಿದ್ದ ಗಂಗಾಧರಯ್ಯಸ್ವಾಮಿಗಳಿಗೆ ಸಮಾಧಾನ ತಂದಿತ್ತು...

'ದೊಡ್ಡ ಅಪ್ಪಗೋಳ ಹಿಂಗ್ಯಾಕ ಮಾಡ್ಲಿಕತ್ತ್ಯಾರ ನೋಡ್ರಿ! ನನ್ನ ಅಂಜಿಕಿ ಬರಾಕತ್ತೈತಿ...' ಎಂದು ಮಾರುತಿ ನಡುಗುವ ದನಿಯಲ್ಲಿ ಅಂದಾಗ ಪಂಚಯ್ಯಸ್ವಾಮಿಗಳು ತಟ್ಟನೆ ವಾಸ್ತವಕ್ಕೆ ಬಂದರು. ಹಾಗೇ, ತಮ್ಮ ತೊಡೆಯ ಮೇಲೆ ಮಲಗಿದ್ದ ಗಂಗಾಧರಯ್ಯಸ್ವಾಮಿಗಳತ್ತ ನೋಡಿದರು. ಆಕ್ಷಣದಲ್ಲಿ ಅವರು ಕಣ್ಣುಗಳನ್ನು ಮೇಲೆ ಸೂರಿಗೆ ನೆಟ್ಟು ಜೋರಿಲೇ ದಾಪಿಸುತ್ತಿದ್ದರು. ಅಗಲವಾಗಿ ಬಾಯಿ ತೆರೆದು ಉಸಿರಾಡುತ್ತಿದ್ದ ಅವರ ಕಟಬಾಯಿಯಿಂದ ಜೊಲ್ಲು ಸುರಿಯುತ್ತಿತ್ತು. ಇದರಿಂದ ಪಂಚಯ್ಯಸ್ವಾಮಿಗಳಿಗೆ ಗಾಬರಿಯಾಗಿ, 'ಅಪ್ಪಗೋಳ, ಹಿಂಗ್ಯಾಕ ಮಾಡ್ಲಿಕತ್ತೀರಿ? ನಿಮಗ ಏನೂ ಆಗಂಗಿಲ್ಲ. ಅಂಜಬ್ಯಾಡ್ರಿ...' ಎನ್ನುತ್ತ ಕತ್ತು ತಿರುಗಿಸಿ, 'ಗಂಟ್ಲು ಆರಿರಬೇಕು. ಲಗೂನ ನೀರು ತಗೊಂಡು ಬಾ...' ಎಂದು ಪಕ್ಕದಲ್ಲಿದ್ದ ಮಾರುತಿಗೆ ಜೋರು ದನಿಯಲ್ಲಿ ಹೇಳಿದರು. ಆಗ, ಮಾರುತಿ ಒಂದೂ ಮಾತಾಡದೆ ಅವಸದಲ್ಲಿ ನೀರು ತರಲು ಓಡಿ ಹೋದ. ಆದರೆ, ಆತ ತಿರುಗಿ ನೀರು ತೆಗೆದುಕೊಂಡು ಬರುವುದರೊಳಗೆ ಪಂಚಯ್ಯಸ್ವಾಮಿಗಳು, 'ಅಪ್ಪಗೋಳ, ನಮ್ಮನ್ನೆಲ್ಲ ಪರದೇಶಿ ಮಾಡಿಟ್ಟು ಹೋದ್ರೆಲ್ಲ...' ಎಂದು ಗಂಗಾಧರಯ್ಯಸ್ವಾಮಿಗಳ ಹಣೆಗೆ ತಲೆಯಿಟ್ಟು ಜೋರಾಗಿ ಅಳುತ್ತಿದ್ದರು. ಆಗಲೇ ಆ ಅಳುವಿನಲ್ಲಿ ಮಾರುತಿಯ ದನಿಯೂ ಸೇರಿಕೊಂಡು ಬೆಳಕು ಹರಿಯುವುದರೊಳಗೆ ಗಂಗಾಧರಯ್ಯಸ್ವಾಮಿಗಳು ಲಿಂಗೈಕ್ಯರಾದ ಸುದ್ದಿ ಊರ ತುಂಬೆಲ್ಲ ಹರಡಿ ಸೂತಕದ ಛಾಯೆ ಹರಡಿಕೊಂಡಿತು!

## ಮಾಯೆ: ಎರಡು

ಗಂಗಾಧರಯ್ಯಸ್ವಾಮಿಗಳು ಲಿಂಗೈಕ್ಯರಾದ ಹತ್ತು ಹನ್ನೆರಡು ವರ್ಷಗಳಲ್ಲಿ ವಿರಕ್ತ ಮಠದ